ಹೆಚ್ಚೂಕಮ್ಮಿ ಅವಳದೇ ಪ್ರಾಯದಲ್ಲಿ ಪೇಪರಿನಲ್ಲಿ ಬಂದಿದ್ದ ತನ್ನ ಕವಿತೆಯನ್ನು ತಾನು ಸಡಗರಿಸಿದ್ದರ ನೆನಪಾಗಿತ್ತು ರೋಹಿಣಿಗೆ.

"ಅಪ್ಪಾ, ನೋಡಿಲ್ಲಿ, ನನ್ನ ಕವನ ಪೇಪರಲ್ಲಿ ಬಂದಿದೆ. ಏನು ಕೊಡಿಸ್ತಿ ನಂಗೆ?"

"ಏನು ಬೇಕೋ ಕೇಳು ಮಗಳೇ. ನೀನು ಏನು ಕೇಳಿದ್ರೂ ಸ್ಯಾಂಕ್ಷನ್..."

ಪಂಚಪ್ರಾಣವಾಗಿದ್ದ ಮಗಳ ಮೇಲೂ ಆ ಕ್ಷಣ ಸಣ್ಣಗೆ ಹೊಟ್ಟೆಕಿಚ್ಚಾಗಿದ್ದು ನೆನೆದರೆ ರೋಹಿಣಿಗೆ ತನ್ನ ಬಗ್ಗೆ ತನಗೇ ನಾಚಿಕೆ. ಮಗಳ ಬಾಳಿನಲ್ಲಾದರೂ ಅವಳು ಕಂಡ ಕನಸುಗಳೆಲ್ಲಾ ನನಸಾಗಲಿ ಎಂಬ ಹೃತ್ಪೂರ್ವಕ ಹಾರೈಕೆಯೊಡನೆ ಅವಳೆದುರು ತನ್ನ ಗುಟ್ಟು ಬಿಟ್ಟುಕೊಟ್ಟಿದ್ದಳು ರೋಹಿಣಿ,

"ನಿನ್ನಪ್ಪ ಸಪೋರ್ಟ್ ಮಾಡಿದ್ರೆ ಇವತ್ತು ನಾನೂ ಲೇಖಕಿ ಅಂತ ಗುರ್ತಿಸಿಕೊಳ್ತಿದ್ನೇನೋ..." ಎನ್ನುವಂತಾ ಮಾತಾಡಿದ್ದು ಆವತ್ತೇ ಮೊದಲು. ಆವತ್ತೇ ಕೊನೆ. ಆದರೂ ಅದನ್ನು ನೆನಪಿಟ್ಟುಕೊಂಡಿದ್ದಳು ಶಾಂಭವಿ. ಅಮ್ಮ ಒಂಟಿಯಾಗಿ ಕಾಲ ಕಳೆಯಬೇಕಾದ ಪರಿಸ್ಥಿತಿಯಲ್ಲಿ ಅದನ್ನು ನೆನಪಿಸಿದ್ದಳು,

"ನಾನೊಂದು ಮಾತು ಹೇಳ್ತೀನಿ. ಆಗಲ್ಲ ಅನ್ಬಾರ್ದು ನೀನು..."

"ಏನು?"

"ಇನ್ನಾದ್ರೂ ನೀನು ಬರೀಬೇಕು ಅಮ್ಮಾ. ಅಪ್ಪನಿಗೆ ಇಷ್ಟ ಇರ್ಲಿಲ್ಲ ಅನ್ನೋದನ್ನ ನೆಪ ಮಾಡ್ಕೊಂಡು ಬರೆಯೋದು ಬಿಟ್ಟೆಟ್ಟೆ. ಈಗ್ಲಾದ್ರೂ ಬರಿ..."

"ನಿನ್ನಪ್ಪನಿಗೆ ಇಷ್ಟ ಇರ್ಲಿಲ್ಲ ಅಂತ ಹೇಳಿದ್ನಲ್ಲ..."

